ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲು 3 ರಿಂದ 6 ನೇ ಪ್ರತಿವಾದಿ ಪರ ವಕೀಲರಿಂದಃ-

1 ನೇ ವಾದಿ ರವರು ನನ್ನ ತಾಯಿಯ ಅಕ್ಕನ ಮಗಳ ಮಗ. ವಾದಿಗಳು ಯಾವ ಪರಿಹಾರ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. 2 ರಿಂದ 5 ನೇ ವಾದಿಗಳು ಸಹ ನನಗೆ ಸಾಮಾನ್ಯ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುತ್ತಾರೆ. 2 ರಿಂದ 5 ನೇ ವಾದಿಗಳು ನನಗೆ ಬರೆದುಕೊಟ್ಟಿರುವ ಸಾಮಾನ್ಯ ಅಧಿಕಾರ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. 1 ನೇ ವಾದಿರವರಿಗೆ ಸಕ್ಕರೆ ಕಾಯಿಲೆ ಇದ್ದು, ಕಣ್ಣು ಸರಿಯಾಗಿ ಕಾಣಿಸುತ್ತಿಲ್ಲ ಮತ್ತು ಕಿವಿ ಸರಿಯಾಗಿ ಕೇಳಿಸುತ್ತಿರುವುದಿಲ್ಲ. 2 ರಿಂದ 5 ನೇ ವಾದಿಗಳು ಆರೋಗ್ಯವಾಗಿ ಇದ್ದಾರೆ ಎಂದರೆ ಸರಿ. 1 ನೇ ವಾದಿ ನ್ಯಾಯಾಲಯದ ಹನುಮಂತರಾಜುರವರ ವಕೀಲರ ಕಛೇರಿಗೆ ಬಂದು ನಿಪಿ-1 ಕ್ಕೆ ಸಹಿ ಮಾಡಿರುತ್ತಾರೆ. ಸದರಿ ದಾಖಲೆಯಲ್ಲಿ 1 ನೇ ವಾದಿರವರಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿಲ್ಲ ಮತ್ತು ಕಿವಿಯು ಸರಿಯಾಗಿ ಕಾಣಿಸುತ್ತಿಲ್ಲ ಎಂದು ಹೇಳಿ ಬರೆಸಿರುವುದಿಲ್ಲ. 1 ನೇ ವಾದಿರವರು ಮೊದಲನೇ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ,

ನಾನು ಮೊದಲನೇ ಪಿಯುಸಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-1 ರ ಅಧಿಕಾರ ಪತ್ರವನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ 2 ರಿಂದ 5 ನೇ ವಾದಿಗಳು ಸಹ ನನಗೆ ಯಾವುದೇ ಅಧಿಕಾರ ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ದಾವಾ ಆಸ್ತಿಯು ವ್ಯವಸಾಯದ ಜಮೀನಾಗಿರುತ್ತದೆ. ದಾವಾ ಆಸ್ತಿಯ ಖಾತೆಯು 3 ರಿಂದ 6 ನೇ ಪ್ರತಿವಾದಿಗಳ ಹೆಸರಿನಲ್ಲಿ ಇರುತ್ತದೆ. ದಾವಾ ಆಸ್ತಿಯು 1980 ರಲ್ಲಿ 1 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿ. ದಾವಾ ಆಸ್ತಿಯ ಮೂಲ ಮಾಲೀಕರು ವೆಂಕಟಾಚಲಪ್ಪನವರಾಗಿರುತ್ತಾರೆ. ಅವರ ತಂದೆಯ ಹೆಸರು ನನಗೆ ಗೊತ್ತಿರುವುದಿಲ್ಲ. ವೆಂಕಟಾಚಲಪ್ಪನವರ ತಂದೆಯ ಹೆಸರು ಮುನಿಯಪ್ಪ ಎಂದರೆ ಸರಿ. ಬ್ಯಾಟಮ್ಮನ ಗಂಡನ ಹೆಸರು ಓಬಯ್ಯ ಅಲಿಯಾಸ್ ಅಬ್ಬಯ್ಯ ಎಂದರೆ ಸರಿ. ವೆಂಕಟಾಚಲಪ್ಪ ಬಿನ್ ಮುನಿಯಪ್ಪ ರವರು ದಾವಾ ಆಸ್ತಿಯನ್ನು ಬ್ಯಾಟಮ್ಮ ಕೋಂ ಓಬಯ್ಯ ಅಲಿಯಾಸ್ ಅಬ್ಬಯ್ಯ ನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಕ್ರಯ ಪತ್ರವನ್ನು ದಿನಾಂಕ 01.08.1948 ರಲ್ಲಿ ನೋಂದಣಿಯಾಗಿರುತ್ತದೆ ಎಂದರೆ ಸರಿ. ಕ್ರಯ ಪತ್ರದ ಆಧಾರದ ಮೇಲೆ ಬ್ಯಾಟಮ್ಮನ ಹೆಸರಿಗೆ ಖಾತೆ ಮತ್ತು ಇತರೆ ದಾಖಲೆಗಳು ಬಂದಿರುತ್ತವೆ ಎಂದರೆ ಸರಿ. ವೆಂಕಟಾಚಲಪ್ಪನವರು ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದರೂ ಸಹ ಆತನ ಮಗ ಮುತ್ತಪ್ಪ ದಿನಾಂಕ 20.06.19580 ರಲ್ಲಿ ತಂದೆಗೆ ಗೊತ್ತಾಗದೆ ಚನ್ನಪ್ಪ ಕೋಂ ಹನುಮಂತಯ್ಯ ಅಲಿಯಾಸ್ ಆಗಲಯ್ಯ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬ್ಯಾಟಮ್ಮ ಕ್ರಯಕ್ಕೆ ಪಡೆದ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿರವರಿಗೆ ದಿನಾಂಕ 21.06.1980 ರಂದು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ದಿನಾಂಕ 21.06.1980 ರ ಕ್ರಯ ಪತ್ರಕ್ಕೆ ಬ್ಯಾಟಮ್ಮನ ಗಂಡನ ಓಬಯ್ಯ ಉಃ ಅಬ್ಬಯ್ಯ ನವರು ಸಹ ಒಪ್ಪಿಗೆ ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಬ್ಯಾಟಮ್ಮನವರು ಬರೆದು ಕೊಟ್ಟ

ಕ್ರಯ ಪತ್ರಕ್ಕೆ ಮುಂದೆ ತೊಂದರೆಯಾಗಬಾರದೆಂದು ಮೇಲೆ ಚನ್ನಮ್ಮ ಸಹ ಸೇರಿ 1 ನೇ ಪ್ರತಿವಾದಿರವರಿಗೆ ಕ್ರಯ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ಪ್ರತಿವಾದಿ ಕ್ರಯಕ್ಕೆ ಪಡೆದ ದಾವಾ ಆಸ್ತಿಯನ್ನು 1983 ರಲ್ಲಿ ಭೂ ಪರಿವರ್ತನೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ, ದಾವಾ ಆಸ್ತಿಯು ಭೂ ಪರಿವರ್ತನೆಯಾಗಿರುತ್ತದಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಭೂ ಪರಿವರ್ತನೆ ಯಾವ ವರ್ಷದಲ್ಲಿ ಆಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಭೂ ಪರಿವರ್ತನೆಯಾದ ಬಗ್ಗೆ ದಾಖಲೆಯನ್ನು ನಾನು ಪರಿಶೀಲಿನೆ ಮಾಡಿರುವುದಿಲ್ಲ.

1 ನೇ ಪ್ರತಿವಾದಿ ಕ್ರಯಕ್ಕೆ ಪಡೆದ ದಾವಾ ಆಸ್ತಿಯನ್ನು ಭೂ ಪರಿವರ್ತನೆ ಮಾಡಿಸಿ ದಿನಾಂಕ 04.06.2004 ರಲ್ಲಿ 2 ರಿಂದ 6 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. 2 ರಿಂದ 6 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಮಾರಾಟ ಮಾಡಿರುವ ವಿಚಾರ 2018 ರಲ್ಲಿ ತಿಳಿದುಬಂದಿರುತ್ತದೆ. 2 ರಿಂದ 6 ನೇ ಪ್ರತಿವಾದಿಗಳು ವಿಭಾಗ ಕೋರಿ ಓ.ಎಸ್ 8807/2014 ರಂತೆ ದಾವೆಯನ್ನು ಬೆಂಗಳೂರಿನ ನ್ಯಾಯಾಲಯದಲ್ಲಿ ಸಲ್ಲಿಸಿ ಡಿಕ್ರಿ ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಡಿಕ್ರಿ ಪಡೆದುಕೊಂಡ ನಂತರ 2 ರಿಂದ 6 ನೇ ಪ್ರತಿವಾದಿಗಳ ಭಾಗಕ್ಕೆ ಬಂದ ಸ್ವತ್ತುಗಳಲ್ಲಿ ಅವರವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ಡಿಕ್ರಿಯಂತೆ 2 ರಿಂದ 6 ನೇ ಪ್ರತಿವಾದಿಗಳ ಭಾಗಕ್ಕೆ ಬಂದ ಸ್ವತ್ತುಗಳ ಬಗ್ಗೆ ಖಾತೆ ಸಹ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ.

ದಾವಾ ಆಸ್ತಿಯ ಸ್ವಾಧೀನ ಮತ್ತು ಖಾತೆ 1980 ರಿಂದ 1ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು, 2004 ರಲ್ಲಿ 2 ರಿಂದ 6ನೇ ಪ್ರತಿವಾದಿಗಳ ಹೆಸರಿಗೆ ಖಾತೆ ಆಗಿ ಅವರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ದಾವಾ ಆಸ್ತಿಗೆ ಈಗ 2 ರಿಂದ 6ನೇ ಪ್ರತಿವಾದಿಗಳೇ ಸಂಪೂರ್ಣ ಮಾಲೀಕರು ಎಂದರೆ ಸರಿ.

ನಾನು ಹಾಜರುಪಡಿಸಿರುವ ನಿಪಿ-2ರ ವಂಶವೃಕ್ಷವನ್ನು ಯಾರು ಪಡೆದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು 2018 ರಲ್ಲಿ 1ನೇ ವಾದಿರವರು ಅರ್ಜಿ ಸಲ್ಲಿಸಿ ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅರ್ಜಿ ಸಲ್ಲಿಸುವಾಗ ಮತ್ತು ಪಡೆದುಕೊಳ್ಳುವ ಸಮಯದಲ್ಲಿ 1ನೇ ವಾದಿರವರ ಜೊತೆ ಹೋಗಿರುವುದಿಲ್ಲ. 1ನೇ ವಾದಿರವರು ಎಲ್ಲಿ ಅರ್ಜಿ ಸಲ್ಲಿಸಿ ಪಡೆದುಕೊಂಡಿರುತ್ತಾರೆ ಎಂದು ನನಗೆ ಖುದ್ದು ಮಾಹಿತಿ ಇರುವುದಿಲ್ಲ. ನಿಪಿ-2ರ ದಾಖಲೆಯನ್ನು ಈ ದಾವೆಗಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-5ರ ಕ್ರಯ ಪತ್ರಯನ್ನುಯಾವ ಕಾರಣಕ್ಕಾಗಿ ನಾನು ಹಾಜರುಪಡಿಸಿರುತ್ತೇನೆ ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಕ್ರಯ ಪತ್ರದಲ್ಲಿ ಯಾವ ಆಸ್ತಿ ಇರುತ್ತದೆ ಮತ್ತುಯಾರು ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ ಎಂದರೆ ಸರಿ.

ವಾದಿಗಳಿಗೂ ಮತ್ತು ಬ್ಯಾಟಮ್ಮ ಕೋಂ ಓಬಯ್ಯ ಉಃ ಅಬ್ಬಯ್ಯನವರಿಗೆ ಯಾವುದೇ ರೀತಿಯ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಗಳು ಬ್ಯಾಟಮ್ಮನವರ ಸಂಬಂಧಿಕರು ಎಂದು ತೋರಿಸಲು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ವಾದಿಗಳಿಗೂ ಬ್ಯಾಟಮ್ಮನಿಗೂ ಯಾವುದೇ ಸಂಬಂಧ ಇಲ್ಲದೇ ಇರುವ ಕಾರಣ ಆ ಬಗ್ಗೆ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಸರಿಯಲ್ಲ ಎಂದು ನುಡಿಯುತ್ತಾರೆ.

ವಾದ ಪತ್ರದ 7 ನೇ ಪ್ಯಾರದಲ್ಲಿ ಹೇಳಿರುವ ವಿಷಯಗಳು ಕಟ್ಟುಕತೆಯಾಗಿದ್ದು ಈ ದಾವೆಗಾಗಿ ಸೃಷ್ಟಿಸಿ ಬರೆಸಿರುತ್ತೇವೆ ಎಂದರೆ ಸರಿಯಲ್ಲ. ವಾದ ಪತ್ರದ 4 ಮತ್ತು 5 ನೇ ಪ್ಯಾರದಲ್ಲಿ ಹೇಳಿರುವ ವಿಚಾರಗಳು ಸುಳ್ಳಿನಿಂದ ಕೂಡಿರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗೂ ವಾದಿಗಳಿಗೂ ಯಾವುದೇ ಸಂಬಂಧ ಮತ್ತು ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ನೀಡಿ ಅವರಿಂದ ಹಣವನ್ನು ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)
(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಮಹೇಶ್ ಬಿ.ಟಿ)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ರಾಮನಗರ.